**ಸಾಕ್ಷಿಯನ್ನು ದಿಃ 02.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ನಂಜುಂಡಸ್ವಾಮಿ ನನ್ನ ಪತಿ. ನನಗೆ ಇಬ್ಬರು ಹೆಣ್ಣು ಮಕ್ಕಳು ಅವರು ಮದುವೆಯಾಗಿ ಗಂಡನ ಮನೆಯಲ್ಲಿದ್ದಾರೆ. ಅವರಿಗೆ 40 ಮತ್ತು 30 ವರ್ಷಗಳಾಗಿವೆ. ಹೆಣ್ಣು ಮಕ್ಕಳು ಇರುವುದಾಗಿ ಅರ್ಜಿಯಲ್ಲಿ ತೋರಿಸಿಲ್ಲ. ಅವರಿಗೆ ಮದುವೆಯಾಗಿದೆ ಎನ್ನುತ್ತಾರೆ. ನನ್ನ ಯಜಮಾನರು ಆ ದಿನ ಬೇರೆಯವರೊಂದಿಗೆ ಬೈಕಿನಲ್ಲಿ ಹೋಗುತ್ತಿದ್ದರು. ಬೈಕ್ ನ್ನು ಶ್ರೀನಿವಾಸರವರು ಚಲಾಯಿಸುತ್ತಿದ್ದರು. ನನ್ನ ಪತಿ ಗುಂಡ್ಲುಪೇಟೆಗೆ ಹೋಗಿ ಬರುವುದಾಗಿ ಹೇಳಿದ್ದರು. ನಾನು ಕೂಲಿ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಗೃಹಿಣಿಯಾಗಿದ್ದೆ. ನನ್ನ ಯಜಮಾನರ ವರಮಾನದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಅಪಘಾತವನ್ನು ನಾನು ಕಣ್ಣಾರೆ ಕಂಡಿಲ್ಲ. ಬೇರೆಯವರು ಕರೆ ಮಾಡಿ ಹೇಳಿದ್ದಾರೆ. ಬಂಗಾರಸ್ವಾಮಿ ಸಂಬಂಧಿಕ ಅಲ್ಲ. ಆತನೇ ದೂರು ನೀಡಿದ್ದಾನೆ.

ಶ್ರೀನಿವಾಸರವರ ತಪ್ಪಿನಿಂದ ಅಪಘಾತವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಕೇಸನ್ನು ಯಾರ ಮೇಲೆ ಹೂಡಿದ್ದೇನೆ ಎಂದು ಗೊತ್ತಿಲ್ಲ. ಅರ್ಜಿಯಲ್ಲಿರುವ ಹೆಬ್ಬೆಟ್ಟು ನನ್ನದೇ. ಅದರಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿನ ಹೆಬ್ಬೆಟ್ಟು ನನ್ನದು. ಅದರಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ಪರಿಹಾರ ಬೇಕು ಎಂದು ನ್ಯಾಯಾಲಯಕ್ಕೆ ಬಂದಿದ್ದೇನೆ.

**ಮರುವಿಚಾರಣೆಃ ಇಲ್ಲ**

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ.**

**ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು**
**ಮತ್ತು ಎಂ.ಎ.ಸಿ.ಟಿ., ಮೈಸೂರು.**